ಈ ಲೇಖನದ ವಿಷಯಾನುಕ್ರಮಣಿಕೆ


| | |
|---|---|
| ದೇವರ ಪೂಜೆಯ ಫಲಗಳು | 2 |
| ಸಮಸ್ತ ಅಭೀಷ್ಟಗಳ ಸಂಪ್ರಾಪ್ತಿ | 3 |
| ಪೂಜೆಯ ಫಲವಾಗಿ ಶ್ರೀಕೃಷ್ಣನ ತಮ್ಮನಾದ ಚಂಡಕ | 6 |
| ದೇವತೆಗಳಿಂದಲೂ ಶ್ಲಾಘಿತರಾಗುತ್ತೇವೆ | 9 |
| ನಮ್ಮ ಸ್ಥಾನವನ್ನು ನಾವು ಪಡೆಯುತ್ತೇವೆ | 10 |
| ಮುಕ್ತಿಯ ಪ್ರಾಪ್ತಿ | 12 |
| ಪೂಜೆಯಿಲ್ಲದೆ ಮುಕ್ತಿಯಿಲ್ಲ | 14 |
| ಪೂಜಕ ಸುಖೀ, ಅಪೂಜಕ ದುಃಖೀ | 15 |
| ಬದುಕಿನ ಸಾರ್ಥಕ್ಯವೇ ದೇವರಪೂಜೆಯಲ್ಲಿ | 15 |

## ದೇವರ ಪೂಜೆಯ ಫಲಗಳು

ಸಕಲ ಪ್ರಾಯಶ್ಚಿತ್ತಗಳ ಫಲವನ್ನು ನೀಡುವದರ ಮುಖಾಂತರ ನಮ್ಮ ಮಹಾಪಾತಕಗಳನ್ನೂ ಪರಿಹಾರ ಮಾಡಿ, ನಮ್ಮನ್ನು ನರಕದಿಂದ ಪಾರು ಮಾಡಿ, ಸಕಲತೀರ್ಥಕ್ಷೇತ್ರಗಳ ಫಲವನ್ನು ನೀಡುವ, ವಿಷ್ಣುಮಾಯೆಯನ್ನು ಗೆಲ್ಲುವ ಮಹಾಸೌಭಾಗ್ಯವನ್ನು ಕರುಣಿಸುವ ದೇವರ ಪೂಜೆಯ ಮಾಹಾತ್ಮ್ಯದ ಕುರಿತು ಹಿಂದಿನ ಲೇಖನದಲ್ಲಿ ತಿಳಿದೆವು.

ನಾವು ಮಾಡುವ ನಮ್ಮನಮ್ಮ ವೇದಶಾಖೆಗಳ ಅಧ್ಯಯನದಿಂದ ಶ್ರೀಹರಿ ಕೋಟಿಪಟ್ಟು ಪ್ರೀತನಾದರೆ ಅದರ ಅನಂತಪಟ್ಟು ಮಿಗಿಲಾಗಿ ನಾವು ಮಾಡುವ ದೇವರ ಪೂಜೆಯಿಂದ ಪ್ರೀತನಾಗುತ್ತಾನೆ ಎನ್ನುವದನ್ನೂ ಅರ್ಥ ಮಾಡಿಕೊಂಡೆವು. ಈಗ ಪೂಜೆಯಿಂದ ಪಡೆಯುವ ಮತ್ತಷ್ಟು ಫಲಗಳ ಕುರಿತು ತಿಳಿಯೋಣ.

## ಸಮಸ್ತ ಅಭೀಷ್ಟಗಳ ಸಂಪ್ರಾಪ್ತಿ

ದೇವರ ಪೂಜೆಯಿಂದ ಇಷ್ಟೇ ಫಲಗಳು ದೊರೆಯುತ್ತವೆ ಎಂದು ಇಯತ್ತೆಯಿಲ್ಲ. ನಮ್ಮ ಭಕ್ತಿ ಜ್ಞಾನಗಳ ಅನುಸಾರವಾಗಿ ನಾವು ಬಯಸುವ ಸಕಲವನ್ನೂ ಈ ದೇವರ ಪೂಜೆಯಿಂದ ಪಡೆಯಲಿಕ್ಕೆ ಸಾಧ್ಯವಿದೆ.

ಕೆಲವರಿಗೆ ಮನೆಕಟ್ಟಬೇಕೆಂಬ ಆಸೆ. ಕೆಲವರಿಗೆ ಮದುವೆ. ಕೆಲವರಿಗೆ ಮಕ್ಕಳು. ಕೆಲವರಿಗೆ ಹಣ. ಹೀಗೆ ಲೌಕಿಕ ಬದುಕಿನ ಹತ್ತಾರು ಆಸೆಗಳು ಮನುಷ್ಯನಿಗಿರುತ್ತದೆ. ಸಾಧನಜೀವನದಲ್ಲಿ ನಡೆಯಲಿಕ್ಕಾಗಿಯೂ ಅನೇಕ ಬಾರಿ ಈ ವಸ್ತುಗಳ ಆವಶ್ಯಕತೆ ಇರುತ್ತದೆ. ಅದಕ್ಕಾಗಿ ಕಂಡಕಂಡವರ ಬಳಿ ಯಾಚನೆ ಮಾಡಬೇಕಾಗಿಲ್ಲ. ಭಕ್ತಿಯಿಂದ ಶ್ರೀಹರಿಯನ್ನು ಆರಾಧಿಸಿದಲ್ಲಿ ಎಲ್ಲವನ್ನೂ ಪಡೆಯಬಹುದು ಎಂದು ಶ್ರೀಮದಾಚಾರ್ಯರು ತಿಳಿಸುತ್ತಾರೆ —

**ಯೋ ಯಾನಿಚ್ಛೇನ್ನರಃ ಕಾಮಾನ್**
**ನಾರೀ ವಾ ವರವರ್ಣಿನೀ**

## ತಾನ್ ಸಮಾಪ್ನೋತಿ ವಿಪುಲಾನ್ ಸಮಾರಾಧ್ಯ ಜನಾರ್ದನಮ್

ಗಂಡಸಾಗಲೀ ಹೆಂಗಸಾಗಲೀ ಏನೇನನ್ನು ಅಪೇಕ್ಷಿಸಿತ್ತಾನೆಯೋ ಆ ಎಲ್ಲವನ್ನೂ ಜನಾರ್ದನನ್ನು ಆರಾಧಿಸುವದರಿಂದ ಪಡೆದುಕೊಳ್ಳಲು ಸಾಧ್ಯ.

ಗಂಡ, ಮಕ್ಕಳು ಮಾಡುವ ಪೂಜೆಗೆ ಪರಿಕರಗಳನ್ನು ಒದಗಿಸಿಕೊಡುವದರಿಂದಲೇ ಸಮಗ್ರ ಪೂಜೆಯ ಫಲ ಹೆಣ್ಣುಮಕ್ಕಳಿಗೆ ಮತ್ತು ಪೂಜೆಯಲ್ಲಿ ಸಹಾಯ ಮಾಡುವ ಯಾರಿಗಾದರೂ ದೊರೆಯುತ್ತದೆ ಎಂದು ಮುಂದೆ ತಿಳಿಯುತ್ತೇವೆ. ಇದಲ್ಲದೇ ಹೆಣ್ಣಮಕ್ಕಳಿಗೂ ಸಹ ಯಾವ ರೀತಿಯ ಪೂಜೆ ವಿಹಿತ ಎನ್ನುವದನ್ನೂ ತಿಳಿಯುತ್ತೇವೆ.

ಶಾಸ್ತ್ರ ತಿಳಿಸಿದ ಪ್ರಕಾರದಿಂದ ಯಾರು ಹರಿಯ ಪೂಜೆ ಮಾಡುತ್ತಾರೆಯೋ ಅವರೆಲ್ಲರೂ ತಮ್ಮ ಅಭೀಷ್ಟಗಳನ್ನು ಪಡೆದುಕೊಳ್ಳುತ್ತಾರೆ.

ಇಲ್ಲಿ ಮತ್ತೊಂದು ಮಾತನ್ನು ಅವಶ್ಯವಾಗಿ ಗಮನಿಸಬೇಕು. ನಮ್ಮ ಅಂತರ್ಯಾಮಿ ನಮ್ಮ ಗೆಳೆಯ. ನಮಗೆ ಹಿತವನ್ನೇ ಮಾಡುವದು ಅವನ

ಉದ್ದೇಶ. ಹೀಗಾಗಿ ನಾವು ನಮ್ಮ ತಪ್ಪು ತಿಳುವಳಿಕೆಯಿಂದ ಯಾವುದನ್ನು ಒಳ್ಳೆಯದು ಎಂದು ತಿಳಿದಿರುತ್ತೇವೆಯೋ ಅದು ನಮಗೆ ಕೆಟ್ಟದ್ದಾಗಿದ್ದಲ್ಲಿ ಶ್ರೀಹರಿ ಅದನ್ನು ನೀಡುವದಿಲ್ಲ.

**"ಯದ್ಯಪ್ರಿಯಂ ಕಾಮಯಂತೇ ನ ರಾತೀಶೋ ಹಿತೋ ಹಿ ಸಃ"**

ಹಾಗಂತ ನಾವು ಮಾಡುವ ಪೂಜೆಯೂ ಸರ್ವಥಾ ವ್ಯರ್ಥವಾಗುವದಿಲ್ಲ, **"ನ ದೇವತೋಷಣಂ ವೃಥಾ"** ಎಂದು ಆಚಾರ್ಯರು ಭರವಸೆಯನ್ನೀಯುತ್ತಾರೆ.

ನಾವು ನಮಗೆ ಅಪ್ರಿಯವಾದದ್ದನ್ನೇ ಕೇಳಿದರೂ, ಅದನ್ನು ನೀಡದೆ ನಮಗೆ ಯಾವುದು ಹಿತವೋ ಅದನ್ನೇ ನೀಡುತ್ತಾನೆ, ನಮ್ಮ ಸ್ವಾಮಿ.

ದೇವರ ಪೂಜೆಯಿಂದ ಇಂತಹ ಅಭೀಷ್ಟ ಪೂರ್ಣವಾಗುವದಿಲ್ಲ ಎಂಬ ಮಾತೇ ಇಲ್ಲ.

# ಪೂಜೆಯ ಫಲವಾಗಿ ಶ್ರೀಕೃಷ್ಣನ ತಮ್ಮನಾದ ಚಂಡಕ

ಶ್ರೀಕೃಷ್ಣನ ತಮ್ಮನಾಗಿ ಹುಟ್ಟಿ ಬರಬೇಕು ಎಂಬ ಅಪೇಕ್ಷೆಯಿಂದ ಚಂಡಕ[1] ಎನ್ನುವ ದೇವತೆ, ಏನು ಉಂಡರೂ ಪರಮಾತ್ಮನ ನೈವೇದ್ಯವನ್ನಷ್ಟೇ ಉಣ್ಣುತ್ತೇನೆ ಎಂದು ನಿರ್ಣಯ ಮಾಡಿಕೊಂಡು ವ್ರತದ ಆಚರಣೆ ಮಾಡುತ್ತಾನೆ. ಅಂದರೆ ದೇವರ ಪೂಜೆಯ ಫಲವಾಗಿ ಆ ದೇವತೆ ದೇವರ ತಮ್ಮನಾಗಿ ಹುಟ್ಟಿ ಬರುವ ಸೌಭಾಗ್ಯವನ್ನು ಪಡೆದುಕೊಂಡ.

ಹೀಗೆ ಸಣ್ಣಪುಟ್ಟ ಅಪೇಕ್ಷೆಗಳಿಂದ ಆರಂಭಿಸಿ ಜ್ಞಾನಭಕ್ತಿವೈರಾಗ್ಯ, ಮೋಕ್ಷದಂತಹ ಮಹಾಫಲಗಳನ್ನೂ ಸಹ ನಾವು ದೇವರ ಪೂಜೆಯಿಂದ ಪಡೆಯಲು ಸಾಧ್ಯ.

---

[1] ಚಂಡಕ ಎಂದರೆ ರುದ್ರದೇವರ ಭೃತ್ಯ. ಚಂಡಕೇಶ್ವರ. ರುದ್ರದೇವರ ದೇವಸ್ಥಾನಗಳಲ್ಲಿ ರುದ್ರಾಭಿಷೇಕದ ನೀರು ಸಂಗ್ರಹವಾಗುವ ಬಳಿಯಲ್ಲಿ ಈತನ ಸ್ಥಾನವಿರುತ್ತದೆ. ಸೋಮಸೂತ್ರದ ಆಚೆಯಲ್ಲಿ ನಿಂತು ಚಂಡಕನನ್ನು ದರ್ಶಿಸಿ ಮತ್ತೆ ಹಾಗೆಯೇ ಹಿಂತಿರುಗಬೇಕು. ಸೋಮಸೂತ್ರ, ಚಂಡಕರನ್ನು ದಾಟಿ ಶಿವನಿಗೆ ಪ್ರದಕ್ಷಿಣೆ ಬರಬಾರದು. ಹೀಗಾಗಿ ರುದ್ರದೇವರಿಗೆ ಕೇವಲ ಅರ್ಧ ಪ್ರದಕ್ಷಿಣೆಯಾಗುತ್ತದೆ. “ರುದ್ರಸ್ಯಾರ್ಧಂ ಪ್ರದಕ್ಷಿಣಾ.”

ದೇವರ ಪೂಜೆಯ ಕುರಿತು ನನ್ನ ಮೇಲೆ ಪರಿಣಾಮ ಬೀರಿದ ನಮ್ಮ ಮನೆಯ ಒಂದು ವೈಯಕ್ತಿಕ ಘಟನೆಯನ್ನು ಹೇಳಬೇಕು. ನಾನು ಹುಟ್ಟಲಿಕ್ಕಿಂತ ಸುಮಾರು ಒಂಭತ್ತು ವರ್ಷಗಳ ಮುಂಚೆ ನಡೆದ ಘಟನೆ. ನನ್ನ ತಂದೆಯವರು ಹಳ್ಳಿಯಲ್ಲಿದ್ದಾಗ ವ್ಯವಸಾಯಕ್ಕಾಗಿ ಒಂದು ಬಾವಿಯನ್ನು ತೋಡುವ ಅನಿವಾರ್ಯತೆಯಿತ್ತು. ಆದರೆ ಕೈಯಲ್ಲಿ ಹಣವಿಲ್ಲ. ಸಾಲ ಮಾಡಿಯೇ ಮಾಡಬೇಕು. ಹೀಗಾಗಿ ಭಯ. ನೀರು ದೊರೆಯುತ್ತದೆಯೋ ಇಲ್ಲವೋ ಎಂದು. ಪ್ರತೀನಿತ್ಯ ದೇವರ ಪೂಜೆಯನ್ನು ಮಾಡಬೇಕಾದರೆ ಪ್ರಾರ್ಥಿಸಲು ಆರಂಭಿಸಿದರು. ನಮ್ಮ ಮನೆಯ ನಾರಾಯಣನ ಪ್ರತಿಮೆಯ ಕಾಲಿನ ಮೇಲೆ ಇಟ್ಟಿದ್ದ ಪಾರಿಜಾತ ಸ್ವಲ್ಪ ಮಾತ್ರ ಅಲ್ಲಾಡಿತಂತೆ. ಗಂಗೆಯನ್ನು ಪೆತ್ತ ಪಾದದ ಅನುಗ್ರಹ ದೊರೆಯಿತು ಎಂದು ಭಾವಿಸಿದ ನಮ್ಮ ತಂದೆ ವಾಯು-ಸ್ತುತಿಯನ್ನು ಹೇಳಿಕೊಳ್ಳುತ್ತ ಇಡಿಯ ಬಾವಿಯನ್ನು ತೋಡಿದ್ದಾರೆ. ಸುಮಾರು ಹದಿನೆಂಟು ಅಡಿ ವ್ಯಾಸದ, ನಲವತ್ತು ಅಡಿ ಆಳದ ಭಾವಿ. ಕಲ್ಲುಸಕ್ಕರೆಯಷ್ಟು ಸಿಹಿಯಾದ ನೀರು.

ಅಂದಿನಿಂದ ನಮ್ಮ ತಂದೆಯವರಿಗೆ ದೇವರ ಪೂಜೆಯಲ್ಲಿ ಅನನ್ಯವಾದ ಶ್ರದ್ಧೆ ಮೂಡಿತ್ತು. ಇಡಿಯ ಜೀವನದಲ್ಲಿ ದೇವರ ಪೂಜೆ ಮಾಡದೇ ಒಂದು ದಿವಸವೂ ಅನ್ನ ತಿನ್ನಲಿಲ್ಲ. ದೇವರ ಪೂಜೆಯ ಫಲದಿಂದಲೇ ತಮ್ಮ ಲೌಕಿಕ ಬದುಕನ್ನೂ ಕಟ್ಟಿಕೊಂಡರು, ಪಾರತ್ರಿಕ ಬದುಕನ್ನೂ ಭದ್ರಗೊಳಿಸಿಕೊಂಡರು. ಈ ಘಟನೆಯನ್ನು ಹೇಳುವಾಗಲೆಲ್ಲ ಅವರ ಧ್ವನಿಯಲ್ಲಿ ದೇವರ ಬಗ್ಗೆ ಇದ್ದ ವಿಶ್ವಾಸವನ್ನು ನಾನು ಕಂಡಿದ್ದೇನೆ[2].

ಈ ರೀತಿಯ ಸಾವಿರಾರು ಉದಾಹರಣೆಗಳು ಭಕ್ತಿಯಿಂದ ಪೂಜೆ ಮಾಡುವ ಪ್ರತಿಯೊಬ್ಬರ ಮನೆಗಳಲ್ಲಿ ದೊರೆಯುತ್ತದೆ.

---

[2] ಇದು ಖಂಡಿತ ದೊಡ್ಡಸ್ತಿಕೆಗಾಗಿ ಹೇಳುತ್ತಿರುವ ಮಾತಲ್ಲ. ನಮ್ಮಂತಹ ಸಣ್ಣವರ ಕಡೆಗೂ ಶ್ರೀಹರಿ ತಿರುಗಿ ನೋಡುತ್ತಾನೆ, ಬಾವಿಯಲ್ಲಿ ನೀರು ದೊರೆಯುತ್ತದೆಯೋ ಇಲ್ಲವೋ ಎಂಬ ಕ್ಷುದ್ರ ಪ್ರಶ್ನೆಯನ್ನಿಟ್ಟುಕೊಂಡು ಹರಿಸೇವೆ ಮಾಡಿದರೂ ಒಲಿಯುತ್ತಾನೆ. ಎಲ್ಲಿಯ ಅನಂತಬ್ರಹ್ಮಾಂಡದ ಒಡೆಯ. ವ್ಯವಸಾಯಕ್ಕೆ ನೀರು ಅಪೇಕ್ಷಿಸುವ ಬಡ ರೈತ ಎಲ್ಲಿ. ಆದರೆ ಭಕ್ತಿಯಿಂದ ಪ್ರಾರ್ಥಿಸಿದರೆ ಒಲಿಯುತ್ತಾನೆ, ದಾರಿ ತೋರುತ್ತಾನೆ ನಮ್ಮ ಸ್ವಾಮಿ, ಅವನು ಅನಾಥನಾಥ, ಗತಿಯಿಲ್ಲದವರ ದೈವ ಎಂಬ ಅವನ ಮಹಾಕಾರುಣ್ಯದ ಚಿಂತನೆಗಾಗಿ ಮಾತ್ರ ಹೇಳಿದ್ದು.

## ದೇವತೆಗಳಿಂದಲೂ ಶ್ಲಾಘಿತರಾಗುತ್ತೇವೆ

ಪ್ರತೀನಿತ್ಯ ಸಾಲಗ್ರಾಮಗಳನ್ನು ಮುಟ್ಟಿ ಪೂಜಿಸುವ ವ್ಯಕ್ತಿಯ ಸೌಭಾಗ್ಯವನ್ನು ಶಾಸ್ತ್ರ ಮೈಯುಬ್ಬಿ ವರ್ಣಿಸುತ್ತದೆ —

**ಸಾಲಗ್ರಾಮಶಿಲಾಸ್ಪರ್ಶಂ**
**ಯಃ ಕರೋತಿ ದಿನೇದಿನೇ ।**
**ವಾಂಛಂತಿ ಕರಸಂಸ್ಪರ್ಶಂ**
**ತಸ್ಯ ದೇವಾಃ ಸವಾಸವಾಃ ।**

ಯಾರು ಪ್ರತಿದಿವಸದಲ್ಲಿಯೂ ತಪ್ಪದೇ ಸಾಲಗ್ರಾಮಗಳ ಪೂಜೆಯನ್ನು ಮಾಡುತ್ತಾರೆಯೋ ಅವರ ಕೈಗಳನ್ನು ಸ್ಪರ್ಶಿಸಬೇಕೆಂದು ಇಂದ್ರಾದಿದೇವತೆಗಳೂ ಅಪೇಕ್ಷಿಸುತ್ತಾರೆ.

ನೋಡಿ. ಮನುಷ್ಯ ತನಗಿಂತ ದೊಡ್ಡವರ ಸಂಪರ್ಕದಲ್ಲಿರಬೇಕು, ಅವರ ಸ್ನೇಹವಿದ್ದರೆ ಭಾಗ್ಯ ಎಂದೆಲ್ಲ ಭಾವಿಸುತ್ತಾನೆ. ಆದರೆ, ದೇವರ ಪೂಜೆಯನ್ನು ನಿತ್ಯ ಮಾಡುತ್ತಿದ್ದರೆ ದೇವತೆಗಳೇ

ನಮ್ಮ ಕರಸ್ಪರ್ಶ ಮಾಡಲು ಹಾತೊರೆಯುತ್ತಾರೆ. ಮಹಾ ಸೌಭಾಗ್ಯವಲ್ಲವೇ ಇದು?

## ನಮ್ಮ ಸ್ಥಾನವನ್ನು ನಾವು ಪಡೆಯುತ್ತೇವೆ

ಮನುಷ್ಯ ಬದುಕಿನ ನಿಜವಾದ ಒದ್ದಾಟ ಇರುವದು ತನಗೆ ಯೋಗ್ಯವಾದ ಸ್ಥಾನವನ್ನು ಗಳಿಸಿಕೊಳ್ಳುವದರಲ್ಲಿ. ಅದು ಕೌಟುಂಬಿಕ ಸ್ಥಾನವಾಗಿರಬಹುದು, ಸಾಮಾಜಿಕಸ್ಥಾನ-ವಾಗಿರಬಹುದು, ಅಥವಾ ಔದ್ಯೋಗಿಕ ಸಂಬಂಧವಾಗಿರಬಹುದು. ಮನುಷ್ಯ ತನ್ನ ಯೋಗ್ಯತೆಗೆ ಸರಿಯಾದ ಸ್ಥಾನ ದೊರೆಯದಿದ್ದಲ್ಲಿ ತಪತಪಿಸುತ್ತಾನೆ. ಒಳಗೇ ಕೊರಗುತ್ತಾನೆ.

ಇನ್ನು ಸಾಧನೆಯ ಮಾರ್ಗದಲ್ಲಿಯೂ, ಸಾಧನೆಯ ನಂತರದ ಮೋಕ್ಷದಲ್ಲಿಯೂ ಸಹ ನಮ್ಮ ಸ್ಥಾನವನ್ನು ನಾವು ಪಡೆಯಲೇಬೇಕು.

ಹೀಗೆ ಸಂಸಾರದ ಸಕಲಾವಸ್ಥೆಗಳಿಂದ ಆರಂಭಿಸಿ ಮೋಕ್ಷದಲ್ಲಿಯೂ ಸಹ ನಮ್ಮ ಸ್ಥಾನ ನಾವು ಪಡೆಯಬೇಕು. ಪಡೆಯಲು ಸುಲಭದ ಉಪಾಯ ಪ್ರತೀನಿತ್ಯ ಶ್ರೀಹರಿಯ ಪೂಜೆ. ದೇವರ ಪೂಜೆ-

ಯನ್ನು ನಾವು ಶ್ರದ್ಧೆಯಿಂದ ಮಾಡಿಕೊಂಡು ಇದ್ದಲ್ಲಿ ನಾವು ಬೇಡದಿದ್ದರೂ ನಮಗೆ ಯೋಗ್ಯವಾದ ಸ್ಥಾನದಲ್ಲಿ ನಮ್ಮನ್ನು ಶ್ರೀಹರಿ ಕೂಡಿಸುತ್ತಾನೆ.

ಹರಿಯ ಆರಾಧನೆ ಮಾಡಿದಲ್ಲಿ ಲೋಕೋತ್ತರವಾದ ಮೋಕ್ಷದಲ್ಲಿ ಶಾಶ್ವತವಾದ ಸ್ಥಾನವನ್ನೇ ದೊರೆಯುತ್ತದೆ, ಇನ್ನು ಈ ಸಂಸಾರದೊಳಗಿನ ಸ್ಥಾನಗಳನ್ನೇನು ಪ್ರತ್ಯೇಕವಾಗಿ ಹೇಳುವದು ಎಂದು ಶ್ರೀಮದಾಚಾರ್ಯರು ತಿಳಿಸುತ್ತಾರೆ —

**ಪ್ರಾಪ್ನೋತ್ಯಾರಾಧಿತೇ ವಿಷ್ಣೌ**
**ಮನಸಾ ಯದ್ಯದಿಚ್ಛತಿ**
**ತ್ರೈಲೋಕ್ಯಾಂತರ್ಗತಂ ಸ್ಥಾನಂ**
**ಕಿಮು ಲೋಕೋತ್ತರೋತ್ತರಮ್**

ಇಂದ್ರದೇವರು ಇಂದ್ರಪದವಿಯನ್ನು ಪಡೆದದ್ದೂ ದೇವರ ಪೂಜೆಯ ಫಲದಿಂದಲೇ —

**ಐಂದ್ರಮಿಂದ್ರಃ ಪರಂ ಸ್ಥಾನಂ**
**ಯಮಾರಾಧ್ಯ ಜಗತ್ಪತಿಮ್**
**ಪ್ರಾಪ ಯಜ್ಞಪತಿಂ ವಿಷ್ಣುಂ**
**ತಮಾರಾಧಯ ಸುವ್ರತ**

## ಮುಕ್ತಿಯ ಪ್ರಾಪ್ತಿ

ಶ್ರೀಮದ್ ಭಾಗವತದಲ್ಲಿ ಒಂದು ಮಾತಿದೆ —

> **“ಅಕಾಮಃ ಸರ್ವಕಾಮೋ ವಾ**
> **ಮೋಕ್ಷಕಾಮ ಉದಾರಧೀಃ ।**
> **ತೀವ್ರೇಣ ಭಕ್ತಿಯೋಗೇನ**
> **ಯಜೇತ ಪುರುಷಂ ಪರಮ್”** ಎಂದು.

ಸಕಲ ಲೌಕಿಕ ಕಾಮನೆಗಳನ್ನು ಪಡೆಯಬೇಕಾದರೂ, ಅಥವಾ ಈ ಲೋಕದ ವಸ್ತುವಿನ ಅಪೇಕ್ಷೆ ನನಗಿಲ್ಲ ಮೋಕ್ಷ ಬೇಕು, ಅದಕ್ಕಾಗಿ ಜ್ಞಾನ ಭಕ್ತಿ ವೈರಾಗ್ಯಗಳು ಅವನ್ನು ಅಭಿವ್ಯಕ್ತಗೊಳಿಸುವ ಸಾಧನ ಬೇಕು ಎಂದು ಅಪೇಕ್ಷೆ ಇರುವವರೂ ಪರಮಪುರುಷನನ್ನೇ ಆರಾಧಿಸಬೇಕು ಎಂದು.

ಹೀಗೆ ಶ್ರೀಹರಿಯ ಪೂಜೆ ಮೋಕ್ಷವನ್ನೂ ಕರುಣಿಸುತ್ತದೆ ಎನ್ನುವದನ್ನು ಆಚಾರ್ಯರು ತಿಳಿಸುತ್ತಾರೆ —

**ಪರಂ ಬ್ರಹ್ಮ ಪರಂ ಧಾಮ**
**ಯೋಽಸೌ ಬ್ರಹ್ಮ ಸನಾತನಮ್ ।**
**ತಮಾರಾಧ್ಯ ಹರಿಂ ಯಾತಿ**
**ಮುಕ್ತಿಮಪ್ಯತಿದುರ್ಲಭಾಮ್ ॥**

ಶ್ರೀಹರಿ ಪರಬ್ರಹ್ಮ, ಅವನೇ ಸರ್ವೋತ್ತಮವಾದ ಆಶ್ರಯಸ್ಥಾನ. ಅವನು ಸನಾತನಬ್ರಹ್ಮ, ಅರ್ಥಾತ್ ಅನಂತ ವೇದಗಳಿಂದ ಪ್ರತಿಪಾದ್ಯನಾದ ಶಾಶ್ವತಪುರುಷ. ಬೇರೆ ಯಾರನ್ನು ಪೂಜಿಸಿದರೂ ದೊರೆಯದ, ಅತ್ಯಂತ ದುರ್ಲಭವಾದ ಮುಕ್ತಿ ಪರಮಾತ್ಮನನ್ನು ಪೂಜಿಸಿದಾಗ ಮಾತ್ರ ದೊರೆಯುತ್ತದೆ.

## ಪೂಜೆಯಿಲ್ಲದೆ ಮುಕ್ತಿಯಿಲ್ಲ

ಆಷ್ಟೇ ಅಲ್ಲ, ದೇವರ ಪೂಜೆಯನ್ನು ಮಾಡದೆ ಮುಕ್ತಿಯನ್ನ ಗಳಿಸಲು ಸಾಧ್ಯವೇ ಇಲ್ಲ, ಹೀಗಾಗಿ ಸಂಸಾರದಿಂದ ಉದ್ಧಾರವಾಗಬಯುಸವ ಪ್ರತಿಯೊಬ್ಬರೂ ತಮತಮಗೆ ಯೋಗ್ಯವಾದ ರೀತಿಯಲ್ಲಿ ಹರಿಯ ಆರಾಧನೆಯನ್ನು ಮಾಡಬೇಕು ಎನ್ನುತ್ತಾರೆ ಶ್ರೀಮದಾಚಾರ್ಯರು —

**ಬಾಹುಭ್ಯಾಂ ಸಾಗರಂ ತರ್ತುಂ**
**ಕ ಇಚ್ಛೇತ ಪುಮಾನ್ ಭುವಿ ।**
**ವಾಸುದೇವಮನಾರಾಧ್ಯ**
**ಕೋ ಮೋಕ್ಷಂ ಗಂತುಮಿಚ್ಛತಿ ।**

ಈಜಾಡಿಕೊಂಡು ಸಮುದ್ರವನ್ನು ದಾಟಲು ಸಾಧ್ಯವೇ? ಶ್ರೀಹರಿಯನ್ನು ಆರಾಧಿಸದೇ ಮೋಕ್ಷವನ್ನು ಪಡೆಯಲು ಸಾಧ್ಯವೇ? ಸಂಸಾರದಲ್ಲಿ ಬಿದ್ದಿರುವ ನಮ್ಮನ್ನು ಶ್ರೀಹರಿಯ ಬಳಿಗೆ ಕರೆದೊಯ್ಯುವ ಅತೀಶ್ರೇಷ್ಠ ಸಾಧನ, ಅದು ದೇವರ ಪೂಜೆ. ಹೀಗಾಗಿ ಪ್ರತೀನಿತ್ಯ ಮಾಡಲೇಬೇಕು.

## ಪೂಜಕ ಸುಖೀ, ಅಪೂಜಕ ದುಃಖೀ

ದುಃಖ ಯಾರಿಗೆ, ಸುಖ ಯಾರಿಗೆ ಎನ್ನುವದನ್ನು ಶ್ರೀಮದಾಚಾರ್ಯರು ಒಂದೇ ಮಾತಿನಲ್ಲಿ ತಿಳಿಸಿಬಿಡುತ್ತಾರೆ —

> ಅನಾರಾಧಿತಗೋವಿಂದಾ
> ಯೇ ನರಾ ದುಃಖಭಾಗಿನಃ
> ಆರಾಧ್ಯ ವಾಸುದೇವಂ ಸ್ಯುಃ
> ನಿತ್ಯಾನಂದೈಕಭಾಗಿನಃ

ಮನುಷ್ಯ ದುಃಖಿಯಾಗಿದ್ದಾನೆ ಎಂದರೆ ಅವನು ಶ್ರೀಹರಿಯ ಪೂಜೆಯನ್ನು ಮಾಡಿಲ್ಲ ಎಂದೇ ಅರ್ಥ. ಶ್ರೀಹರಿಯನ್ನು ಆರಾಧಿಸಿದವರ ನಿತ್ಯಾನಂದದ ಮೋಕ್ಷವನ್ನು ಪಡೆದೇ ಪಡೆಯುತ್ತಾನೆ.

## ಬದುಕಿನ ಸಾರ್ಥಕ್ಯವೇ ದೇವರಪೂಜೆಯಲ್ಲಿ

ಇಂತಹ ಅದ್ಭುತ ಮಹಿಮೆಯ ದೇವರ ಪೂಜೆ ಸುಲಭವಾಗಿ ದೊರೆಯುವದಿಲ್ಲ. ಶ್ರೀಹರಿಗುರುಗಳ ಅನಂತ ಕಾರುಣ್ಯ ನಮ್ಮ ಮೇಲಿದ್ದಲ್ಲಿ ಮಾತ್ರ ದೊರೆಯಲು ಸಾಧ್ಯ.  ಯಾರಿಗೆ ಪ್ರತೀನಿತ್ಯ ದೇವರ

ಪೂಜೆ ಮಾಡುವ ಯೋಗವಿದೆಯೋ ಅವನು ಮಹಾಸೌಭಾಗ್ಯವಂತ ಎಂದು ಶ್ರೀಮದಾಚಾರ್ಯರು ತಿಳಿಸುತ್ತಾರೆ —

**ಸಂಸಾರೇಸ್ಮಿನ್ ಮಹಾಘೋರೇ**
**ಜನ್ಮರೋಗಭಯಾಕುಲೇ**
**ಅಯಮೇಕೋ ಮಹಾಭಾಗಃ**
**ಪೂಜ್ಯತೇ ಯದಧೋಕ್ಷಜಃ**

ಹುಟ್ಟು, ಸಾವು, ರೋಗ, ಭಯಗಳಿಂದ ತುಂಬಿದ ಅತ್ಯಂತ ಘೋರವಾದ ಈ ಸಂಸಾರದ ಸರ್ವಶ್ರೇಷ್ಠ ಮುಖವೆಂದರೆ ಅದು ಹರಿಯ ಪೂಜೆ.

ನಾವು ಸಂಸಾರದಲ್ಲಿದ್ದಾಗ ಶ್ರೀಹರಿಯನ್ನು ಪೂಜಿಸಬಹುದು ಎನ್ನುವದೊಂದೇ ಈ ಸಂಸಾರದಲ್ಲಿರುವ ಮಹಾಗುಣ.

ಅಷ್ಟೇ ಅಲ್ಲ, ಮನುಷ್ಯರಾಗಿ ಹುಟ್ಟಿ ಬಂದಾಗ ಶ್ರೀಹರಿಯನ್ನು ಪೂಜಿಸಿದೆವೆಂದಾದರೆ ಅದು ನಮ್ಮ ಬದುಕಿಗೆ ಸಾರ್ಥಕ್ಯವನ್ನು ಪಡೆದಂತೆ ಎಂದು ಆಚಾರ್ಯರು ಹೇಳುತ್ತಾರೆ -

**ಸಮಸ್ತಲೋಕನಾಥಸ್ಯ**
**ದೇವದೇವಸ್ಯ ಶಾರ್ಂಗಿಣಃ**
**ಸಾಕ್ಷಾದ್ ಭಗವತೋ ವಿಷ್ಣೋಃ**
**ಪೂಜನಂ ಜನ್ಮನಃ ಫಲಮ್**

ಶ್ರೀಹರಿ ಇಡಿಯ ಬ್ರಹ್ಮಾಂಡದ ಒಡೆಯ. ದೇವತೆಗಳೂ ದೇವ ಅವನು. ಅವನೇ ನಮ್ಮ ಹೃದಯದರಸ. ಆ ಅಂತರ್ಯಾಮಿಯನ್ನು ಪ್ರತಿಮೆಯಲ್ಲಿ ಆವಾಹಿಸಿ ಪೂಜಿಸುವದು ಎಂದರೆ ಆ ಶ್ರೀವಿಷ್ಣುವಿನ ಸಾಕ್ಷಾತ್ ಪೂಜೆ.

ಅಂತರ್ಯಾಮಿಯನ್ನು ಸಾಕ್ಷಾತ್ತಾಗಿ ಪೂಜಿಸುವದರಲ್ಲಿಯೇ ಮನುಷ್ಯಜನ್ಮದ ಸಾರ್ಥಕ್ಯ ಅಡಗಿದೆ.

ಹೀಗೆ ದೇವರ ಪೂಜೆ ಸಮಸ್ತ ಅಭೀಷ್ಟಗಳನ್ನು ಕರುಣಿಸುವ ಕಾಮಧೇನು.

ನಮಗೂ ದೇವರಿಗೂ ಮಧ್ಯದಲ್ಲಿರುವ ಸೇತು.

ದೇವರನ್ನು ಒಲಿಸಿಕೊಳ್ಳಲು ಇರುವ ಸುಲಭದ ಮಾರ್ಗ.

ಈ ದೇವರ ಪೂಜೆಯನ್ನು ನಮ್ಮ ಮನಸ್ಸಿಗೆ ಬಂದಂತೆ ಮಾಡುವಂತಿಲ್ಲ. ಶಾಸ್ತ್ರ ತಿಳಿಸಿದ ಪ್ರಕಾರದಲ್ಲಿಯೇ ಮಾಡಬೇಕು.

ನಮ್ಮ ಮನಸ್ಸಿಗೆ ತೋಚಿದಂತೆ ಪೂಜಿಸುವದೂ ಸಹ ಪೂಜೆಯಲ್ಲಿನ ಮೂವತ್ತೆರಡು ಅಪರಾಧಗಳಲ್ಲಿ ಒಂದು ಅಪರಾಧ ಎಂದು ವರಾಹದೇವರು ಭೂದೇವಿಗೆ ತಿಳಿಸುತ್ತಾರೆ — "ಕಾಮಾನುಸಾರಿತಾ"

ಆದ್ದರಿಂದ ದೇವರ ಪೂಜೆಯನ್ನು ವಿಧಿಬದ್ಧ-ವಾಗಿಯೇ ಮಾಡಬೇಕು. ಶ್ರೀಮದಾಚಾರ್ಯರು, ಶ್ರೀಮಧ್ವಾನುಜಾಚಾರ್ಯರು, ಶ್ರೀಮಟ್ಟೀಕಾ-ಕೃತ್ಪಾದರು, ಶ್ರೀ ನಾರಾಯಣಪಂಡಿತಾಚಾರ್ಯರು ಮುಂತಾದ ಮಹಾನುಭಾವರು ತಮ್ಮ ಕೃತಿಗಳಲ್ಲಿ ತಿಳಿಸಿ ಹೇಳಿರುವ ಆ ದೇವರ ಪೂಜೆಯ ವಿಧಿಗಳ ಕುರಿತು ತಿಳಿಯಲು ಆರಂಭಿಸೋಣ.

ಮುಂದಿನ ಲೇಖನದಲ್ಲಿ ಸಮಗ್ರ ದೇವರ ಪೂಜೆಯ ಪಕ್ಷಿನೋಟವನ್ನು ನೀಡುತ್ತೇನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು ವರ್ಗಾಯಿಸುವಾಗ**

**"ವಿಶ್ವನಂದಿನಿ ಗಮ್ಯ ತಲುಪಲಿ"**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

**Vishnudasa Nagendracharya**

No. 2, "Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491